S. C. No. 22/2021
PW.03

**ದೋ.ಸಾ. : 10 ಪ್ರಾ.ಸಾ. : 03**

**ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ ವಕೀಲರಿಂದ**

8. ನಮ್ಮ ಮನೆಯಲ್ಲಿ ನಾವು 7 ಜನ ಇರುತ್ತೇವೆ. ನಾವು 3 ಜನ ಅಣ್ಣ-ತಮ್ಮಂದಿರು ಹಾಗೂ ನಮಗೆ ಒಬ್ಬಳು ತಂಗಿ ಇರುತ್ತಾಳೆ. ನಮ್ಮ ಮನೆಯ ಅಕ್ಕ-ಪಕ್ಕದಲ್ಲಿ 10-12 ಮನೆಗಳು ಇರುತ್ತವೆ. ನಮ್ಮ ಮನೆಯಿಂದ ಮಸೀದಿಗೆ 10 ನಿಮಿಷದ ದಾರಿ ಇರುತ್ತದೆ. ನಾನು ಮಸೀದಿಗೆ ನಮಾಜ್ ಮಾಡಲು ಮದ್ಯಾಹ್ನ 01-00 ಗಂಟೆಗೆ ಹೋಗುತ್ತೇನೆ. ಸಾಮಾನ್ಯವಾಗಿ ನಮ್ಮ ಧರ್ಮದವರು ಮಸೀದಿಗೆ ನಮಾಜ್ ಗೆ ಹೋಗುತ್ತಾರೆ ಎಂದರೆ ಸರಿ. ನಮ್ಮ ಮನೆಯಿಂದ ಮೃತ ಅಬುತಾಲಿಬ್ ರವರ ಮನೆ, ನಮ್ಮ ಮನೆಯ ಪಕ್ಕದ ಓಣಿಯ 4 ನೇ ಮನೆಯಾಗಿರುತ್ತದೆ. ಮೃತ ಅಬುತಾಲಿಬ್ ರವರ ಮನೆಗೆ ಹೋಗುವಾಗ, ಮದ್ಯದಲ್ಲಿ ಚಾಸಾ-14 ರವರ ಮನೆ ಸಿಗುತ್ತದೆ ಎಂದರೆ ಸಾಕ್ಷಿಯು ಆ ದಾರಿಯ ಮೂಲಕವೂ ಹೋಗಬಹುದು, ಅದಲ್ಲದೇ ಇನ್ನೊಂದು ದಾರಿಯ ಮೂಲಕವೂ ಸಹ ಹೋಗಬಹುದು.

9. ಚಾಸಾ-14 ರವರ ಮನೆಯ ಮುಂದಿನ ರಸ್ತೆಯಲ್ಲಿ ಬಹಳಷ್ಟು ಜನರು ಓಡಾಡುತ್ತಾರೆ ಎಂದರೆ ಸರಿಯಲ್ಲ. ನಾನು 8 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಫೋಟೋ ತೆಗೆಯುವ ಬಗ್ಗೆ ನಾನು ಯಾವುದೇ ವಿಶೇಷವಾದ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ಆದರೆ ತರಬೇತಿಯನ್ನು ಪಡೆದುಕೊಂಡಿರುತ್ತೇನೆ. ಆದರೆ ಅದರ ಬಗ್ಗೆ ಯಾವುದೇ ಪ್ರಮಾಣ ಪತ್ರ ಇರುವುದಿಲ್ಲ. ಮದುವೆ ಸಮಾರಂಭಗಳಲ್ಲಿ ವಿಡಿಯೋ ಮಾಡಬೇಕಾದರೆ ಅಥವಾ ಫೋಟೋ ತೆಗೆಯಲು ತರಬೇತಿಯ ಅವಶ್ಯಕತೆ ಇರುತ್ತದೆ ಎಂದರೆ ಸರಿ. ನಾನು ವೃತ್ತಿಯಲ್ಲಿ ಆಟೋ ಚಾಲಕನಾಗಿದ್ದು, ಪರವಾನಗಿಯನ್ನು ಹೊಂದಿರುತ್ತೇನೆ, ಸದರಿ ಪರವಾನಗಿಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ನಾನು ಆಟೋ ಚಾಲಕನಲ್ಲ ಎಂದರೆ ಸರಿಯಲ್ಲ. ಮೃತ ಅಬುತಾಲಿಬ್ ಪಂಚಾಯತಿಯ ಸದಸ್ಯನಾಗಿರಲಿಲ್ಲ ಎಂದರೆ ಸರಿ. ಅವರು ನಮ್ಮ ಊರಿನ ಮುಖಂಡರಲ್ಲ ಎಂದರೆ ಸರಿ. ನಮ್ಮ ಊರಿನ ಮಸೀದಿಯಲ್ಲಿ ಕಮಿಟಿ ಇರುತ್ತದೆ ಎಂದರೆ ಸರಿ. ನಮ್ಮ ಊರಿನಲ್ಲಿ ಯಾವುದಾದರೂ ಸಣ್ಣ-ಪುಟ್ಟ ಘಟನೆಗಳು ನಡೆದರೆ, ಮಸೀದಿಯ ಕಮಿಟಿಗೆ ದೂರು ನೀಡುತ್ತೇವೆ ಎಂದರೆ ಸರಿಯಲ್ಲ. ಆ ಕಮಿಟಿಯಲ್ಲಿ ಮಸೀದಿಯ ಮೌಲಾನ ಅಧ್ಯಕ್ಷರು ಆಗಿರುತ್ತಾರೆ ಎಂದರೆ ಸಾಕ್ಷಿಯು ಊರಿನ ಮುಖಂಡರು ಅಧ್ಯಕ್ಷರು ಆಗಿರುತ್ತಾರೆ ಎಂದು ನುಡಿಯುತ್ತಾರೆ.

10. ಈ ಪ್ರಕರಣದ ಆರೋಪಿಯ ಮೇಲೆ, ಈ ಮೊದಲು ಯಾವುದೇ ದೂರು ದಾಖಲಾಗಿರುವುದಿಲ್ಲ ಎಂದರೆ ಸಾಕ್ಷಿಯು ಈ ಪ್ರಕರಣದ ಘಟನೆ ನಡೆಯುವ 13 ದಿನಗಳ ಮೊದಲು ಚಾಸಾ-14 ರವರು ಆರೋಪಿ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-14 ರವರನ್ನು ಹೊರತುಪಡಿಸಿ, ಬೇರೆ ಯಾರು ಆರೋಪಿಯ ಮೇಲೆ ದೂರನ್ನು ದಾಖಲಿಸಿರುವುದಿಲ್ಲ ಎಂದರೆ ಸರಿ. ಘಟನೆ ನಡೆದ ದಿನ ಅಬುತಾಲಿಬ್ ರವರ ಮನೆಗೆ ನಾನು, ನನ್ನ ಹೆಂಡತಿ ಸುಮಾರು 12-30 ಗಂಟೆಗೆ ಹೋಗಿರುತ್ತೇವೆ. ನಾವು ಅಬುತಾಲಿಬ್ ರವರ ಮನೆಗೆ ಹೋದಾಗ, ಅವರ ಮನೆಯಲ್ಲಿ ಅಬುತಾಲಿಬ್, ಆತನ ಹೆಂಡತಿ ಮತ್ತು ಮಕ್ಕಳು ಇದ್ದರು. ಅಬುತಾಲಿಬ್ ರವರು ಆತನ ಹೆಂಡತಿ ಮತ್ತು ಮಕ್ಕಳೊಂದಿಗೆ ಆರೋಪಿಯನ್ನು ವಿಚಾರಿಸಲು, ಚಾಸಾ-14 ರವರ ಮನೆಯ ಬಳಿ ಬಂದಾಗ, ನಾನು, ನನ್ನ ಹೆಂಡತಿ, ಅಬುತಾಲಿಬ್, ಆತನ ಹೆಂಡತಿ ಮತ್ತು ಮಕ್ಕಳು ಹಾಗೂ ಚಾಸಾ-14 ಮಾತ್ರ ಇದ್ದೆವು. ಚಾಸಾ-14 ರವರ ಮನೆಯ ಮುಂದಿನ ರಸ್ತೆ ಕಚ್ಚಾ ರಸ್ತೆ ಎಂದರೆ ಸರಿ. ಚಾಸಾ-14 ರವರ ಮನೆ ಹಾಗೂ ಆರೋಪಿಯ ಮನೆಯ ನಡುವೆ ತೆಂಗಿನ ಮರಗಳು ಇರುತ್ತವೆ ಎಂದರೆ ಸಾಕ್ಷಿಯು ತೆಂಗಿನ ಮರಗಳು ಇರುವುದಿಲ್ಲ, ಆದರೆ ಸಣ್ಣ-ಪುಟ್ಟ ಹೂವಿನ ಗಿಡಗಳು ಇರುತ್ತವೆ ಎಂದು ನುಡಿಯುತ್ತಾರೆ.

11. ಘಟನೆ ನಡೆದ ಸ್ಥಳದಿಂದ ಚಾಸಾ-14 ರವರ ಮನೆ 15 ಅಡಿ ದೂರದಲ್ಲಿರುತ್ತದೆ. ಆರೋಪಿಯ ಮನೆಯ ಮುಂದಿನ ರಸ್ತೆಯ ಮೇಲೆ ನಿಂತವರಿಗೆ, ಆರೋಪಿ ಮನೆಯ ಜಗುಲಿಯ ಮೇಲೆ ಇದ್ದವರು ಕಾಣುತ್ತಾರೆ ಎಂದರೆ ಸರಿ. ಘಟನೆ ನಡೆಯುವ ಕಾಲದಲ್ಲಿ ಆರೋಪಿಯ ಮನೆಯಲ್ಲಿ ಆತನ ತಂದೆ-ತಾಯಿ, ಹೆಂಡತಿ- ಮಕ್ಕಳು ವಾಸವಾಗಿದ್ದರು ಎಂದರೆ ಸರಿ. ಈ ಪ್ರಕರಣದ ಘಟನೆಯು ಮದ್ಯಾಹ್ನ 01-00 ರಿಂದ 01-15 ರ ವರೆಗೆ ನಡೆದಿರುತ್ತದೆ. ಘಟನೆ ನಡೆಯುವ ಸಮಯದಲ್ಲಿ, ನೀನು ಯಾವ ಸ್ಥಳದಲ್ಲಿ ಇದ್ದೆ ಎಂದು ಪ್ರಶ್ನೆ ಕೇಳಲಾಗಿ, ಸಾಕ್ಷಿಯು ನಾನು ಅಲ್ಲಿಯೇ ಇದ್ದು, ಆರೋಪಿ ಚಾಕುವನ್ನು ತರಲು ಮನೆಯ ಒಳಗೆ ಹೋದಾಗ, ನಾನು ಸಹ ಮೊಬೈಲ್ ನ್ನು ತರಲು ಚಾಸಾ-14 ರವರ ಮನೆಯ ಒಳಗೆ ಹೋಗಿ, ಅವರ ಮನೆಯ ಹೊರಗೆ ಬಂದು, ನಿಂತು, ಘಟನೆಯನ್ನು ನನ್ನ ಮೊಬೈಲ್ ಮೂಲಕ ವಿಡಿಯೋ ಮಾಡಿರುತ್ತೇನೆ. ನಾನು ವಿಡಿಯೋ ಮಾಡುತ್ತಿದ್ದ ಸ್ಥಳದಿಂದ, ಘಟನಾ ಸ್ಥಳವು ಸುಮಾರು 20 ಅಡಿ ದೂರದಲ್ಲಿರುತ್ತದೆ. ನಿವೇನಾದರೂ ಗಲಾಟೆಯನ್ನು ತಪ್ಪಿಸಲು

ಹೋಗಿದ್ದಿರಾ? ಎಂದರೆ ಸಾಕ್ಷಿಯು ನಾನು ಆ ಸಮಯದಲ್ಲಿ ವಿಡಿಯೋ ಮಾಡುತ್ತಿದ್ದು, ಚಾಸಾ–11 ಮತ್ತು 12 ರವರು ಗಲಾಟೆ ತಪ್ಪಿಸಲು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

12. ಚಾಸಾ–11 ರವರ ಮನೆಯ ಘಟನಾ ಸ್ಥಳದಿಂದ 2 ಕಿ.ಮೀ ದೂರ ಇರುತ್ತದೆ ಹಾಗೂ ಚಾಸಾ–12 ರವರ ಮನೆ ಅರ್ಧ ಕಿ.ಮೀ ದೂರದಲ್ಲಿರುತ್ತದೆ, ಆ ಸಮಯದಲ್ಲಿ ಅವರಿಬ್ಬರೂ ಮಸೀದಿಗೆ ನಮಾಜ್ ಮಾಡಲು ಬಂದಿದ್ದರು. ಚಾಸಾ–11 ಮತ್ತು 12 ರವರ ಎಷ್ಟು ಸಮಯಕ್ಕೆ ಘಟನಾ ಸ್ಥಳಕ್ಕೆ ಬಂದರು ಎಂದರೆ, ಸಾಕ್ಷಿಯು ಗಲಾಟೆಯ ಶಬ್ದ ಕೇಳಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಮೊಬೈಲ್ ಚಾಸಾ–14 ರವರ ಮನೆಯಲ್ಲಿತಾ? ಎಂದರೆ ಸಾಕ್ಷಿಯು ನಾವು ಆ ದಿನ ಬಟ್ಟೆ ತೊಳೆಯಲು ಮತ್ತು ಸ್ನಾನ ಮಾಡಲು ಹೋಗಿದ್ದರಿಂದ, ಆ ದಿನ ನನ್ನ ಮೊಬೈಲ್ ನ್ನು ಅಲ್ಲಿಯೇ ಇಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಬಳಿ ಮೊಬೈಲ್ ಇದ್ದು, ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆರೋಪಿ ಹಾಗೂ ಅಬುತಾಲಿಬ್ ರವರು ಸುಮ್ಮನಾಗಬಹುದು ಎಂದು ತಿಳಿದು ನಾನು ಪೊಲೀಸರಿಗೆ ಮಾಹಿತಿ ನೀಡಿರುವುದಿಲ್ಲ ಎಂದು ಹೇಳಿರುತ್ತಾರೆ. ಚಂದಾವರದಿಂದ ಪೊಲೀಸ್ ಠಾಣೆ 20 ಕಿ.ಮೀ ದೂರದಲ್ಲಿರುತ್ತದೆ. ಘಟನೆಯ ನಂತರವೂ ಸಹ ನಾನು ಪೊಲೀಸರಿಗೆ ದೂರು ನೀಡಿಲ್ಲ ಎಂದರೆ ಸರಿ. ಘಟನೆಯ ನಂತರವೂ ಸಹ ಪೊಲೀಸರಿಗೆ ಮಾಹಿತಿ ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ಬಳಿ ಪೊಲೀಸರ ನಂಬರ್ ಇತ್ತು.

13. ಘಟನೆಯ ನಂತರ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ದೂರನ್ನು ನೀಡಿರುತ್ತಾರೆ ಎಂಬ ವಿಷಯ ತಿಳಿದ ನಂತರವೂ ಸಹ ನಾನು ಪೊಲೀಸರನ್ನು ಭೇಟಿ ಆಗಿರುವುದಿಲ್ಲ, ಆದರೆ ನನ್ನ ಮೊಬೈಲ್ ನಲ್ಲಿದ್ದ ವಿಡಿಯೋವನ್ನು ಉದಯ ಎನ್ನುವ ಪೊಲೀಸರಿಗೆ ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿಃ 05–05–2021 ರಂದು ನಾನು ಪೊಲೀಸ್ ಠಾಣೆಗೆ ಹೋಗಿ, ನನ್ನ ಮೊಬೈಲ್ ನಲ್ಲಿದ್ದ ವಿಡಿಯೋವನ್ನು ಪೊಲೀಸರಿಗೆ ತೋರಿಸಿರುತ್ತೇನೆ. ಸಾಮಾನ್ಯವಾಗಿ ಯಾವುದೇ ವಿಡಿಯೋವನ್ನು ಎಡಿಟಿಂಗ್ ಮಾಡಬಹುದು ಎಂದರೆ ಸರಿ. ಘಟನಾ ಸಮಯದಲ್ಲಿ ನಾನು ಯಾವುದೇ ವಿಡಿಯೋವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರು ಮುಂದೆ ಯಾವುದೇ ಮೊಬೈಲ್ ನ್ನು ಹಾಜರುಪಡಿಸಿಲ್ಲ ಹಾಗೂ ನನ್ನ ಸಮಕ್ಷಮ ಪೊಲೀಸರು ಯಾವುದೇ ಸ್ಕ್ರೀನ್ ಶಾಟ್ಸ್ ಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ನನ್ನ ಸಮಕ್ಷಮ ಯಾವುದೇ ಜಪ್ತು ಪಂಚನಾಮೆಯನ್ನು ಮಾಡಿಲ್ಲ, ಪೋಟೊ

ತೆಗೆದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯು ಚಾಸಾ–14 ರವರ ಮನೆಗೆ ಹೋದಾಗ, ಆಕೆಗೆ ಆರೋಪಿಯು ತನ್ನ ಲುಂಗಿಯನ್ನು ಎತ್ತಿ, ತನ್ನ ಗುಪ್ತಾಂಗವನ್ನು ತೋರಿಸಿರುವುದಿಲ್ಲ, ಯಾವುದೇ ಅಶ್ಲೀಲ ಪದಗಳನ್ನು ಬಳಸಿಲ್ಲ ಎಂದರೆ ಸರಿಯಲ್ಲ.

**ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ